ಕಳೆದುಕೊಳ್ಳಬಾರದು. ಕಳೆದುಕೊಳ್ಳದಿರುವಂಥ ಎಚ್ಚರವನ್ನು ಪಡೆದವರಿಗೆ ಹುಡುಕುವ ಪ್ರಯಾಸವೂ ಇರದಷ್ಟೆ.

ನಸ್ರುದ್ದೀನ್ ಬೀಗದ ಕೈ ಕಳೆದುಕೊಂಡದ್ದು ಮನೆಯಲ್ಲಿ. ಆದರೆ ಅವನು ಅದನ್ನು ಹುಡುಕಿದ್ದು ಮಾತ್ರ ಬೀದಿಯಲ್ಲಿ. ಅದಕ್ಕೆ ಅವನು ನೀಡಿದ ಸಮಾಧಾನವೂ ಕುತೂಹಲಕಾರಿಯಾಗಿದೆ. 'ರಸ್ತೆಯಲ್ಲಿ ಬೆಳಕು ಚೆನ್ನಾಗಿದೆ; ಆದುದರಿಂದ ಅದನ್ನು ಇಲ್ಲಿ ಹುಡುಕುತ್ತಿರುವೆ.' ಯಾವುದಾದರೊಂದು ವಸ್ತು ನಮಗೆ ಕಾಣಬೇಕಾದರೆ ಬೆಳಕು ಬೇಕು. ರಸ್ತೆಯಲ್ಲಿ ಅದು ಚೆನ್ನಾಗಿರುವುದರಿಂದ ಅವನು ಅಲ್ಲಿ ಹುಡುಕುತ್ತಿದ್ದಾನೆ. ಮುಲ್ಲಾನ ತರ್ಕದಲ್ಲಿರುವುದು ಅರ್ಧಸತ್ಯ ಮಾತ್ರವೇ. ವಸ್ತು ಕಾಣಲು ಬೆಳಕು ಬೇಕು; ದಿಟ. ಆದರೆ ಅವನು ವಸ್ತುವನ್ನು ನೋಡಲು ರಸ್ತೆಗೆ ಬಂದಿಲ್ಲ; ಕಳೆದಿರುವ ವಸ್ತುವನ್ನು ಹುಡುಕುತ್ತಿದ್ದಾನೆ. ಹೋಗಲಿ, ಆ ವಸ್ತು ಅಲ್ಲಿ ಕಳೆದಿದೆಯೆ? ಕಳೆದಿರುವುದು ಅಲ್ಲಿ ಅಲ್ಲ! ಬೆಳಕು ಇದ್ದ ಮಾತ್ರಕ್ಕೆ ಅಲ್ಲಿ ಇಲ್ಲದ ವಸ್ತು ನಮಗೆ ಕಾಣಲು ಹೇಗಾದೀತು? ನಸ್ರುದ್ದೀನನದ್ದು ಅರೆ ತಿಳಿವಳಿಕೆ. ಅವನ ಅರಿವಿನಲ್ಲಿಯೇ ಸಮಸ್ಯೆಯಿದೆ. ವಸ್ತುಗಳು ಕಾಣಲು ಬೆಳಕು ಬೇಕು – ಎಂಬ ಸಿದ್ಧಾಂತವನ್ನು ಅವನು ಅತಿವ್ಯಾಪ್ತಿ ಮಾಡುತ್ತಿದ್ದಾನೆ. ವಸ್ತು ಇದ್ದರೆ ಮಾತ್ರವೇ ಬೆಳಕು ಅದನ್ನು ಕಾಣಿಸಬಲ್ಲದ್ದು; ಇಲ್ಲದಿರುವ ವಸ್ತುವನ್ನು ಕಾಣಿಸಲು ಬೆಳಕಿಗೆ ಸಾಧ್ಯವಾಗದು. ಇದು ಹೇಗೆಂದರೆ ಪ್ರಜಾಪ್ರಭುತ್ವದಲ್ಲಿ ಯಾರು ಬೇಕಾದರೂ ದೇಶದ ಪ್ರಧಾನಿ ಆಗಬಹುದು. ಆದರೆ ಎಲ್ಲರೂ ಪ್ರಧಾನಿಗಳಾಗಲು ಸಾಧ್ಯವಿಲ್ಲ. ಯಾರು ಬೇಕಾದರೂ ಆಗಬಹುದು – ಎನ್ನುವುದು ಸಾಮಾನ್ಯವಾಕ್ಯ. ಆದರೆ ಪ್ರಧಾನಿ ಆಗಲು ನಿರ್ದಿಷ್ಟ ಕ್ರಮಗಳು ಇವೆ; ಆ ಕ್ರಮದಲ್ಲಿ ಮಾತ್ರವೇ, ಆ ದೇಶದ ಯಾವೊಬ್ಬ ಪ್ರಜೆಯೂ, ಪ್ರಧಾನಿ ಆಗಬಹುದು. ಈ ಕ್ರಮವನ್ನು ಉಲ್ಲಂಘಿಸುವುದು ಆಗದು. ಈ ಪದ್ಧತಿಯನ್ನು ಉಲ್ಲಂಘಿಸಲು ಸಾಧ್ಯವಿಲ್ಲ ಎನ್ನುವುದನ್ನು 'ಯಾರು ಬೇಕಾದರೂ ಪ್ರಧಾನಿ ಆಗಬಹುದು' ಎಂಬ ಮಾತಿನಲ್ಲಿಯೇ ಸೇರಿಕೊಂಡಿದೆ ಎಂಬುದನ್ನು ಮರೆಯುವಂತಿಲ್ಲ. ವಸ್ತುವನ್ನು ಪತ್ತೆ ಮಾಡಲು ಬೆಳಕು ಬೇಕು ನಿಜ; ಆದರೆ ಆ ಸ್ಥಳದಲ್ಲಿ ಆ ವಸ್ತು ಇರಬೇಕು ಎಂಬ ಪೂರ್ವಜ್ಞಾನವೂ ನಮಗೆ ಬೇಕಾಗುತ್ತದೆ. ವಿಷಯವೊಂದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಅದನ್ನು

**ಜೀವನದಲ್ಲಿ ನಾವು ತೆಗೆದುಕೊಳ್ಳುವ ಎಷ್ಟೋ ನಿರ್ಧಾರಗಳಿಗೆ ಅರೆಬರೆ ಗ್ರಹಿಕೆಗಳೇ ಆಧಾರಗಳಾಗಿರುತ್ತವೆ. ಇದರ ಜೊತೆಗೆ ಪೂರ್ವಗ್ರಹವೂ ಸೇರಿಕೊಳ್ಳುತ್ತದೆ. ಪೂರ್ವಗ್ರಹ ಎಂಬ 'ಆಲಯ'ವನ್ನು ಕಟ್ಟಿಕೊಳ್ಳುವುದೇ ಸರಿಯಲ್ಲ. ಹೀಗೆ ಕಟ್ಟಿಕೊಂಡ ಇಕ್ಕಟ್ಟಿನ ಮನೆಗೆ ಬೀಗ ಹಾಕುವುದು ಇನ್ನೂ ಸರಿಯಲ್ಲ. ಹೀಗೆ ಬೀಗ ಹಾಕಿದ ಮೇಲೆ ಅದರ ಕೈಯನ್ನು ಕಳೆದುಕೊಳ್ಳುವಂಥ ಮೈ ಮರೆವು ತಪ್ಪು ಮಾತ್ರವೇ ಅಲ್ಲ, ಅಪಾಯಕಾರಿಯೂ ಹೌದು.**